# ಭಾರತೀಯ ಐಕಾನ್

■ ಪ್ರವೀಣ ಕುಲಕರ್ಣಿ

ಭಾರತೀಯ ಸಂಗೀತ ಜಗತ್ತಿನಲ್ಲಿ ಮಹಾರಾಷ್ಟ್ರದ ಮಂಗೇಶ್ಕರ್ ಕುಟುಂಬದ್ದು ಬಹುದೊಡ್ಡ ಹೆಸರು. ಅರ್ಧ ಡಜನ್‌ಗಟ್ಟಲೆ ಮಹಾನ್ ಸಂಗೀತಗಾರರನ್ನು ದೇಶಕ್ಕೆ ಕೊಟ್ಟ ಕುಟುಂಬ ಅದು. ಅದರಲ್ಲಿ ಲತಾ ಮಂಗೇಶ್ಕರ್ ಹಾಗೂ ಆಶಾ ಭೋಸ್ಲೆ ಅವರದಂತೂ ಅಜರಾಮರವಾಗಿ ಉಳಿಯುವಂತಹ ಹೆಸರುಗಳು. ಇಬ್ಬರೂ ಹಿಂದಿ ಚಿತ್ರರಂಗದ ಸ್ವರ ಸಾಮ್ರಾಜ್ಞಿಯರಾಗಿ ಮೆರೆದವರು.

ಅಕ್ಕ ಲತಾ ಅವರಿಗೆ ಸರಿಸಮನಾದ ಪೈಪೋಟಿ ನೀಡಿ, ಸೈ ಎನಿಸಿಕೊಂಡ ಆಶಾ, 12 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿದವರು. ಅತ್ಯಧಿಕ ರೆಕಾರ್ಡಿಂಗ್ ಹಾಡುಗಳ ಒಡತಿ ಎಂಬ ಗಿನ್ನಿಸ್ ದಾಖಲೆಯನ್ನೂ ಬರೆದವರು. ದಾದಾ ಸಾಹೇಬ್ ಫಾಲ್ಕೆ, ಪದ್ಮವಿಭೂಷಣ ಮೊದಲಾದ ಪ್ರಶಸ್ತಿಗಳಿಗೆ ಭಾಜನರಾದ ಅವರನ್ನು ಮೊನ್ನೆ ಮೊನ್ನೆಯಷ್ಟೇ ‘ಮಹಾರಾಷ್ಟ್ರ ಸಮ್ಮಾನ್’ ಪ್ರಶಸ್ತಿಯೂ ಹುಡುಕಿಕೊಂಡು ಬಂದಿದೆ.

ತಾರಕ ಗಾಯನದಲ್ಲಿ ಆಶಾ ಅವರದು ಎತ್ತಿದ ಕೈ. ಚಿತ್ರರಂಗದ ಗೀತೆಗಳಲ್ಲದೆ ಪಾಪ್, ಗಜಲ್, ಭಜನ್, ಜನಪದ, ಕವ್ವಾಲಿ ಶಾಸ್ತ್ರೀಯ ಹಾಗೂ ರವೀಂದ್ರ ಸಂಗೀತ ಎಲ್ಲದಕ್ಕೂ ಅವರ ಸಿರಿಕಂಠ ಸದಾ ಸಿದ್ಧ. ಭಾರತವಷ್ಟೇ ಅಲ್ಲದೆ ಪ್ರಪಂಚದ 20 ಭಾಷೆಗಳಲ್ಲಿ ಅವರು ಹಾಡಿದ್ದಾರೆ. ಚಿತ್ರರಂಗದ ಹಿನ್ನೆಲೆ ಗಾಯನದ ಎಲ್ಲ ಅವಕಾಶಗಳನ್ನೂ ಗೀತಾ ದತ್, ಶಂಶಾದ್ ಬೇಗಂ ಮತ್ತು ಲತಾ ಅವರಂತಹ ಘಟಾನುಘಟಿಗಳು ಬಾಚಿಕೊಳ್ಳುತ್ತಿದ್ದ ಆ ಕಾಲದಲ್ಲಿ, ಮೊದಮೊದಲು ಅವರಿಂದ ತಿರಸ್ಕರಿಸಲ್ಪಟ್ಟ ಅವಕಾಶಗಳು ಮಾತ್ರ ಆಶಾ ಅವರಿಗೆ ಸಿಗುತ್ತಿದ್ದವು.

ಸಿಕ್ಕ ಅವಕಾಶಗಳನ್ನು ಆಶಾ ಅವರು ಬಳಸಿಕೊಂಡ ರೀತಿ ಹೇಗಿತ್ತೆಂದರೆ ಒ.ಪಿ. ನಯ್ಯರ್, ಖಯ್ಯಾಂ, ರವಿ, ಎಸ್.ಡಿ. ಬರ್ಮನ್, ಆರ್.ಡಿ. ಬರ್ಮನ್ ಅವರಂತಹ ಸಂಗೀತ ನಿರ್ದೇಶಕರ ಪಾಲಿಗೆ ಆಶಾ ಕಣ್ಮಣಿಯಾದರು. ಏಳು ದಶಕಗಳವರೆಗೆ ಬಾಲಿವುಡ್‌ನ ಸಂಗೀತ ಜಗತ್ತನ್ನು ಅವರು ಆಳಿದರು. ಚಿತ್ರರಂಗಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ ಸಂಗೀತದ ಅಲ್ಬಂಗಳನ್ನೂ ಅವರು ಹೊರತಂದರು. ಸಂಗೀತದ ತಂಡವನ್ನು ಕಟ್ಟಿಕೊಂಡು ಹಲವು ದೇಶಗಳನ್ನು ಅವರು ಸುತ್ತಿದರು. ಆಶಾ ಅವರ ಕಛೇರಿ ಎಂದರೆ ಸಂಗೀತಾಸಕ್ತರು ಮುಗಿ ಬೀಳುತ್ತಿದ್ದರು.



ಆಶಾ ಅವರ ಗಾಯನ ಎಷ್ಟೊಂದು ವೈವಿಧ್ಯದಿಂದ ಕೂಡಿದೆಯೋ ಅವರ ವೈಯಕ್ತಿಕ ಬದುಕು ಕೂಡ ಅಷ್ಟೇ ವರ್ಣರಂಜಿತವಾಗಿದೆ. ತಮ್ಮ 16ನೇ ವಯಸ್ಸಿನಲ್ಲಿ ಅವರು 31ರ ಹರೆಯದ ಗಣಪತರಾವ್ ಭೋಸ್ಲೆ ಅವರೊಂದಿಗೆ ಪ್ರೀತಿಸಿ, ಮದುವೆಯಾದರು. ಧುಮ್ಮಿಕ್ಕುತ್ತಿದ್ದ ಅವರ ಪ್ರೀತಿಯ ಮುಂದೆ ಕುಟುಂಬದ ವಿರೋಧ ನಿಲ್ಲಲಿಲ್ಲ. ಈ ಜೋಡಿಗೆ ಮೂವರು ಮಕ್ಕಳು (ಇಬ್ಬರು ಪುತ್ರರು, ಒಬ್ಬ ಪುತ್ರಿ). ಆದರೆ, ಆಶಾ–ಗಣಪತರಾವ್ ಮಧ್ಯೆ ಭಿನ್ನಾಭಿಪ್ರಾಯ ಬಂದು, 1960ರಲ್ಲಿ ಅವರ ದಾಂಪತ್ಯ ಮುರಿದು ಬಿತ್ತು. 20 ವರ್ಷಗಳ ಬಳಿಕ ಆಶಾ ಅವರು ಸಂಗೀತ ನಿರ್ದೇಶಕ ರಾಹುಲ್ ದೇವ್ ಬರ್ಮನ್ ಅವರೊಂದಿಗೆ ಮರು ವಿವಾಹವಾದರು. ಬರ್ಮನ್‌ಗೂ ಅದು ಎರಡನೇ ಮದುವೆ. ಅಲ್ಲದೆ, ಅವರು ಆಶಾ ಅವರಿಗಿಂತ ಆರು ವರ್ಷ ಚಿಕ್ಕವರಾಗಿದ್ದರು.

ಪಾಕಪ್ರವೀಣೆಯಾದ ಆಶಾ, ಆಗಾಗ ಮನೆಯಲ್ಲಿ ಆತಿಥ್ಯ ಏರ್ಪಡಿಸುವುದುಂಟು. ಸ್ವತಃ ಖಾದ್ಯ ತಯಾರಿಸಿ ಅತಿಥಿಗಳಿಗೆ ಉಣಬಡಿಸುವುದು ಅವರ ನೆಚ್ಚಿನ ಹವ್ಯಾಸ. ‘ಸಂಗೀತವನ್ನು ಫುಲ್‌ಟೈಮ್ ಕಾಯಕವಾಗಿ ಸ್ವೀಕರಿಸುವ ಮುನ್ನ ನಾನು ಕುಕ್ ಆಗಿದ್ದೆ. ನಾಲ್ಕು ಮನೆಗಳ ಅಡುಗೆ ಕೆಲಸ ಮಾಡಿ ಹಣ ಸಂಪಾದಿಸುತ್ತಿದ್ದೆ’ ಎಂದು ಅವರು ಸಂದರ್ಶನವೊಂದರಲ್ಲಿ ಹೇಳಿದ್ದರು. ಹೋಟೆಲ್ ಉದ್ಯಮಕ್ಕೂ ಇಳಿದ ಆಶಾ, ಇಂಗ್ಲೆಂಡ್, ಗಲ್ಫ್ ದೇಶಗಳಲ್ಲಿ ಹಲವು ರೆಸ್ಟೊರೆಂಟ್‌ಗಳನ್ನೂ ಹೊಂದಿದ್ದಾರೆ.

ಅಕ್ಕ ಲತಾ ಜತೆಗಿನ ಆಶಾ ವೈರತ್ವದ ಕುರಿತು ಮಾಧ್ಯಮಗಳಲ್ಲಿ ಬಹಳಷ್ಟು ಚರ್ಚೆಯಾಗಿದ್ದಿದೆ. ಚಿಕ್ಕವರಿದ್ದಾಗ ಇಬ್ಬರೂ ಅನ್ಯೋನ್ಯವಾಗಿದ್ದರು. ಆಶಾ ಅವರ ಆರೈಕೆಯನ್ನು ಹೆಚ್ಚಾಗಿ ಲತಾ ಅವರೇ ಮಾಡುತ್ತಿದ್ದರು. ಶಾಲೆಗೆ ಹೋಗುವಾಗ ತಂಗಿಯನ್ನು ಲತಾ ಜತೆಗೆ ಕರೆದೊಯ್ಯುತ್ತಿದ್ದರು. ಇಷ್ಟೊಂದು ಅನ್ಯೋನ್ಯವಾಗಿದ್ದ ಸಹೋದರಿಯರ ಮಧ್ಯೆ ಬಿರುಕು ಮೂಡಿದ್ದು ಹೇಗೆ? ಅದಕ್ಕೆ ಆಶಾ ಅವರೇ ಒಮ್ಮೆ ಉತ್ತರಿಸಿದ್ದರು. ‘ನಾನು ಪ್ರೀತಿಸಿ ಮದುವೆಯಾಗಿದ್ದು, ಮನೆಬಿಟ್ಟು ಹೋಗಿದ್ದು ಅಕ್ಕನಿಗೆ ತುಂಬಾ ಸಿಟ್ಟು ತರಿಸಿತ್ತು. ಆಗಿನಿಂದ ಅವಳು ನನ್ನೊಂದಿಗೆ ಮಾತು ಬಿಟ್ಟಿದ್ದಳು’ ಎಂದು ಅವರು ವಿವರಿಸಿದ್ದರು.

ಒ.ಪಿ. ನಯ್ಯರ್ ಅವರು ಒಮ್ಮೆ ಹೇಳಿದ್ದ ಮಾತುಗಳು ಸಹೋದರಿಯರ ಸಂಬಂಧಗಳ ಮೇಲೆ ಒಳನೋಟ ಬೀರುತ್ತವೆ. ‘ಲತಾ ಮತ್ತು ಆಶಾ ಒಂದೇ ರಸ್ತೆಯಲ್ಲಿ ಮನೆ ಮಾಡಿದ್ದರು. ಇಬ್ಬರ ಮನೆಗೆಲಸದವಳು ಒಬ್ಬಳೇ ಆಗಿದ್ದಳು. ಲತಾ ಈಗಷ್ಟೇ ರೆಕಾರ್ಡಿಂಗ್ ಮುಗಿಸಿಕೊಂಡು ಬಂದರು ಎಂದು ಆಕೆ ಪದೇ ಪದೇ ಬಂದು ಆಶಾಗೆ ಹೇಳುತ್ತಿದ್ದಳು. ಇದರಿಂದ ಆಶಾ ಕುಗ್ಗಿಹೋಗಿದ್ದರು. ಆಕೆಯಲ್ಲಿ ಆತ್ಮವಿಶ್ವಾಸ ತುಂಬಲು ಹರಸಾಹಸ ಮಾಡಬೇಕಾಯಿತು. ಲತಾ ಫೋಬಿಯಾ ಆಕೆಯನ್ನು ಅಷ್ಟೊಂದು ಆವರಿಸಿತ್ತು’ ಎಂದು ನೆನಪಿಸಿಕೊಂಡಿದ್ದರು. ಬಾಳ ಮುಸ್ಸಂಜೆಯಲ್ಲಿರುವ ಇಬ್ಬರ ಸಹೋದರಿಯರೂ ಈಗ ಕಹಿ ನೆನಪುಗಳನ್ನು ಮರೆತಿದ್ದಾರೆ.

ಲತಾ ಅವರಂತಹ ದೈತ್ಯ ಪ್ರತಿಭೆಯ ಛಾಯೆಯಿಂದ ಹೊರಬಂದು, ಸಂಗೀತದಲ್ಲಿ ಶಿಖರಪ್ರಾಯ ಸಾಧನೆ ಮೆರೆದು, ಸ್ವಾತಂತ್ರ್ಯಪೂರ್ವದ ಆ ಕಾಲಘಟ್ಟದಲ್ಲೇ ಪ್ರೀತಿಯ ಕರೆಗೆ ಓಗೊಟ್ಟು, ಬದುಕು ಬಂದಂತೆ ಸ್ವೀಕರಿಸಿ ಯಶಸ್ಸಿನ ನಗೆ ಹೊರಸೂಸಿದವರು ಆಶಾ. ಅವರ ಸಾಧನೆ, ಭಾರತೀಯ ಪ್ರತಿಯೊಬ್ಬ ಕನಸುಗಾರನ ಪಾಲಿಗೂ ಆಶಾಕಿರಣ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65